**<u>ಸಾಕ್ಷಿಗೆ ದಿನಾಂಕ 30.01.2025 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು: 2ನೇ ಎದುರುದಾರರ ಪರ ಶ್ರೀ. ಎ ಎನ್ ಹೆಗ್ಡೆ ವಕೀಲರಿಂದಃ</u>**

1. ನಾನು ಎಲೆಕ್ಟ್ರಿಕಲ್ ಗುತ್ತಿಗೆದಾರ ಪರವಾನಗಿಯನ್ನು 2010 ರಲ್ಲಿ ಪಡೆದುಕೊಂಡಿರುತ್ತೇನೆ. ನಾನು ಗುತ್ತಿಗೆದಾರ ಸಂಘದ ಸದಸ್ಯನಾಗಿರುತ್ತೇನೆ. ನನ್ನ ಗುತ್ತಿಗೆದಾರ ಪರವಾನಗಿಯನ್ನು ಮತ್ತು ಸಂಘದ ಸದಸ್ಯರ ಗುರುತಿನ ಚೀಟಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಬಹುದು. ಈಗಲೂ ಸಹಾ ನನ್ನ ಬಳಿ ಗುತ್ತಿಗೆದಾರ ಪರಿವಾನಗಿ ಚಾಲ್ತಿಯಲ್ಲಿರುತ್ತದೆ. ನಾನು ಈಗ ಗುತ್ತಿಗೆ ಕಾಮಗಾರಿಗಳನ್ನು ನಡೆಸುತ್ತಿರುವುದಿಲ್ಲ. ನಾನು ಅಪಘಾತವಾಗುವುದಕ್ಕಿಂತ ಮುಂಚೆ ಆದಾಯ ತೆರಿಗೆ ಪಾವತಿದಾರನಾಗಿದ್ದೆನು. ಈಗ ನಾನು ಆದಾಯ ತೆರಿಗೆ ಕಟ್ಟುತ್ತಿರುವುದಿಲ್ಲ. ನಾನು ಗುತ್ತಿಗೆ ಪಡೆದ ಕೆಲಸಗಳ ಬಗ್ಗೆ ದಾಖಲಾತಿಗಳನ್ನು ಹಾಜರು ಪಡಿಸಲು ತೊಂದರೆ ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ದ್ವಿಚಕ್ರ ವಾಹನ ಚಲಾಯಿಸಲು ಚಾಲನಾ ಪರವಾನಗಿ ಇರುತ್ತದೆ. ನನಗೆ ಈಗ ದ್ವಿಚಕ್ರ ವಾಹನ ಚಲಾಯಿಸಲು ಆಗುವುದಿಲ್ಲ ಎಂದು ಹೇಳಿ ಸಂಬಂಧಿತ ಪ್ರಾದೇಶಿಕ ಸಾರಿಗೆ ಇಲಾಖೆಯವರಿಗೆ ಮರಳಿಸಿರುವುದಿಲ್ಲ ಎಂದರೆ ಸರಿ.

2. ಅಪಘಾತವು ಬೆಳತ್ತೂರು ಹೊಸಕೋಟೆ ರಸ್ತೆಯ ಮೇಲೆ ಆಗಿರುತ್ತದೆ ಎಂದರೆ ಸರಿ. ನಾನು ಹಳ್ಳಿಯ ಕಡೆ ರಸ್ತೆಯಿಂದ ಬಂದು ಮುಖ್ಯರಸ್ತೆಗೆ ಎಡಗಡೆಯಿಂದ ತಿರುವು ಪಡೆದುಕೊಳ್ಳಲು ವಾಹನ ನಿಲ್ಲಿಸಿದಾಗ, ಹಿಂದಿನಿಂದ 1ನೇ ಎದುರುದಾರನ ವಾಹನದ ಚಾಲಕನು ಡಿಕ್ಕಿ ಪಡಿಸಿರುತ್ತಾನೆ. ಅಪಘಾತ ಪಡಿಸಿದ ವಾಹನದ ಎಡಭಾಗದ ಹಿಂಬದಿಯ ಗಾಲಿಗೆ ನನ್ನ ವಾಹನ ಡಿಕ್ಕಿ ಹೊಡೆದಿರುತ್ತದೆ ಎಂದರೆ

ನನಗೆ ಗೊತ್ತಿಲ್ಲ. ನಾನು ಅಚಾನಕ್ಕಾಗಿ ಮುಖ್ಯರಸ್ತೆಗೆ ಬಂದ ಕಾರಣ 1ನೇ ಎದುರುದಾರನ ವಾಹನಕ್ಕೆ ಡಿಕ್ಕಿ ಪಡಿಸಿರುತ್ತೇನೆ ಎಂದರೆ ಸರಿಯಲ್ಲ.

3. ಅಪಘಾತದ ನಂತರ ನನ್ನನ್ನು ಆಕ್ಸಿಸ್ ಆಸ್ಪತ್ರೆಗೆ ದಾಖಲಿಸಿರುತ್ತಾರೆ. ಅಲ್ಲಿ ನನಗೆ ಪ್ರಥಮ ಚಿಕಿತ್ಸೆಯನ್ನು ನೀಡಿ ಎಂ ಎಸ್ ರಾಮಯ್ಯ ಆಸ್ಪತ್ರೆಗೆ ದಾಖಲಿಸಿರುತ್ತಾರೆ. ಅಪಘಾತದ ಪರಿಣಾಮವಾಗಿ ನನ್ನ 6 ರಿಂದ 10 ಪಕ್ಕೆಲುಬುಗಳ ಮೂಳೆ ಮುರಿತವಾಗಿರುತ್ತದೆ. ನನಗೆ ಶಸ್ತ್ರಚಿಕಿತ್ಸೆ ಮಾಡಿದ ವೈದ್ಯರು ಡಾ.ಮದನ್ ಮತ್ತು ಡಾ. ರುದ್ರೇಶ್. ಎಂ ಎಸ್ ರಾಮಯ್ಯ ಆಸ್ಪತ್ರೆಯಲ್ಲಿ ಒಂದು ತಿಂಗಳುಗಳ ಕಾಲ ಒಳರೋಗಿಯಾಗಿ ದಾಖಲಾಗಿದ್ದೆನು. ನಾನು ಮೂರು ತಿಂಗಳಿಗೊಂದು ಸಲ ಮುಂದುವರೆದ ಚಿಕಿತ್ಸೆಗೆ ಹೋಗುತ್ತಿದ್ದೇನೆ. ನನ್ನ ವೈದ್ಯಕೀಯ ಖರ್ಚು ರೂ.3,50,000/- ಆಗಿದೆ ಎಂದು ತೋರಿಸಲು ಎಲ್ಲಾ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ 9ನೇ ಖಂಡಿಕೆಯಲ್ಲಿ ನಮೂದು ಮಾಡಿರುವ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

4. ನನ್ನ ದ್ವಿಚಕ್ರ ವಾಹನ 2019 ರ ಮಾಡಲ್ ಆಗಿರುತ್ತದೆ. ಸದರಿ ವಾಹನಕ್ಕೆ ವಿಮಾ ಪಾಲಿಸಿ ಇತ್ತು. ನನ್ನ ವಾಹನದ ವಿಮಾ ಕಂಪನಿಯಿಂದ ದ್ವಿಚಕ್ರ ವಾಹನಕ್ಕೆ ಉಂಟಾದ ಜಖಂಗಳ ಖರ್ಚನ್ನು ಪಾವತಿ ಮಾಡಿಕೊಳ್ಳಲು ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ದ್ವಿಚಕ್ರ ವಾಹನವನ್ನು ಕಂಪನಿಯ ಶೋ ರೂಂನಲ್ಲಿ ದುರಸ್ತಿ ಮಾಡಿಸಿರುತ್ತೇನೆ ಎಂದರೆ ಸರಿ. ದುರಸ್ತಿಯ ಸರ್ವೆ ರಿಪೋರ್ಟ್ ಮಾಡಿಸಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನ್ನ ದ್ವಿಚಕ್ರ ವಾಹನ 2019 ರ ಮಾಡಲ್ ಆಗಿರುವುದರಿಂದ ಕೆಲವೊಂದು ಬಿಡಿಭಾಗಗಳು ಸವಕಳಿ ಆಗಿರುವುದರಿಂದ ಅಪಘಾತದ ನೆಪ ಮಾಡಿಕೊಂಡು ಅಪಘಾತದಲ್ಲಿ ಜಖಂಗೊಳಗಾಗದ ಬಿಡಿ ಭಾಗಗಳನ್ನು ದುರಸ್ತಿ ಮಾಡಿಸಿರುತ್ತೇನೆ

ಎಂದರೆ ಸರಿಯಲ್ಲ. ನಾನು ಹಾಜರು ಮಾಡಿರುವ ವೈದ್ಯಕೀಯ ಬಿಲ್ಲುಗಳ ಪೈಕಿ ಕೆಲವು ಮುಂಗಡ ಪಾವತಿಗಳು ಇರುತ್ತವೆ ಎಂದರೆ ಸರಿ. ವೈದ್ಯಕೀಯ ಬಿಲ್ಲುಗಳು ಸೃಷ್ಟಿತ ದಾಖಲೆ ಎಂದರೆ ಸರಿಯಲ್ಲ. ನಾನು ಈಗ ಆರೋಗ್ಯವಾಗಿದ್ದೇನೆ ಎಂದರೆ ಸರಿಯಲ್ಲ. ಈ ಅಪಘಾತವು ನನ್ನ ತಪ್ಪಿ ನಿಂದ ಉಂಟಾಗಿದ್ದರೂ ಸಹಾ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿ ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**1ನೇ ಎದುರುದಾರರು ಗೈರುಹಾಜರು. ವಕೀಲರು ಗೈರುಹಾಜರು. ಈ ಕಾರಣದಿಂದ ಪಾಟೀಸವಾಲು ಇಲ್ಲ ತೆಗೆದುಕೊಳ್ಳಲಾಗಿರುತ್ತದೆ.**

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**